# UNIVERSITY OF MYSORE

PROCEEDING OF THE SPECIAL ACADEMIC COUNCIL MEETING HELD ON 04-04-2025

ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/171/2024-2025

ದಿನಾಂಕ 19-04-2025

ಅಡಕ: ನಡವಳಿ ಪ್ರತಿಗಳು 1-6

**"ಪ್ರಮಾಣಿತ ಅಂಚೆ ಮೂಲಕ"**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 04-04-2025ರಂದು ನಡೆದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ:04-04-2025 ರಂದು ಅಪರಾಹ್ನ 4-00 ಗಂಟೆಗೆ, ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ದಾಖಲಿಸಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲಿ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ. ಸದರಿ ನಡವಳಿಗಳಿಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ದಾಖಲಿಸಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ,

ತಮ್ಮ ನಂಬುಗೆಯ

Lingaraju 19/04/25

ಉಪ ಕುಲಸಚಿವ (ಪ್ರಾಧಿಕಾರ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ದಿನಾಂಕ: 04–04–2025 ರಂದು ಅಪರಾಹ್ನ 4.00 ಗಂಟೆಗೆ ನಡೆದ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ನಡವಳಿ.

<u>ಸಭೆಗೆ ಹಾಜರಾಗಿದ್ದ ಸದಸ್ಯರುಗಳು:</u>

| | | |
|---|---|---|
| 01 | ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು | – ಅಧ್ಯಕ್ಷರು |
| 02 | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ. ಬೆಂಗಳೂರು ಇವರ ಪರವಾಗಿ<br>ಪ್ರೊ. ಬಿ ಚಂದ್ರಶೇಖರ್,<br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು | – ಸದಸ್ಯರು |
| 03 | ಡಾ. ಅಂತೋನಿ ಪೌಲ್ ರಾಜ್.ಸಿ | – ಸದಸ್ಯರು |
| 04 | ಡಾ. ಪ್ರಿಯ ಸಿ ಜೆ | – ಸದಸ್ಯರು |
| 05 | ಶ್ರೀಮತಿ ಕೆ.ಎಂ ಪದ್ಮಾವತಿ | – ಸದಸ್ಯರು |
| 06 | ಪ್ರೊ. ಎಸ್.ಜೆ. ಮಂಜುನಾಥ್, ಡೀನರು, ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯ | – ಸದಸ್ಯರು |
| 07 | ಪ್ರೊ. ಸಿ. ವೆಂಕಟೇಶ್, ಡೀನರು, ಶಿಕ್ಷಣ ನಿಕಾಯ ಹಾಗೂ ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು. | – ಸದಸ್ಯರು |
| 08 | ಪ್ರೊ. ಜಿ.ಆರ್ ಜನಾರ್ಧನ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | – ಸದಸ್ಯರು |
| 09 | ಪ್ರೊ. ಎಂ.ಎಸ್ ಶೇಖರ್, ಡೀನರು, ಕಲಾ ನಿಕಾಯ | – ಸದಸ್ಯರು |
| 10 | ಪ್ರೊ. ಕೆ. ನಾಗೇಂದ್ರ ಬಾಬು, ಡೀನರು ವಾಣಿಜ್ಯ ನಿಕಾಯ | – ಸದಸ್ಯರು |
| 11 | ಪ್ರೊ. ಕೆ.ಮಂಟೇಲಿಂಗು, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು. | – ಸದಸ್ಯರು |
| 12 | ಪ್ರೊ. ಡಿ ಆನಂದ್ | – ಸದಸ್ಯರು |
| 13 | ಪ್ರೊ. ಕೆ. ಕೆಂಪರಾಜು | – ಸದಸ್ಯರು |
| 14 | ಪ್ರೊ. ಹೆಚ್.ಡಿ ರೇವಣ್ಣಸಿದ್ದಪ್ಪ | – ಸದಸ್ಯರು |
| 15 | ಪ್ರೊ. ಸುರೇಶ್ | – ಸದಸ್ಯರು |
| 16 | ಡಾ. ಸರಸ್ವತಿ.ಪಿ, ಗ್ರಂಥಪಾಲಕರು (ಪ್ರಭಾರ) ವಿಶ್ವವಿದ್ಯಾನಿಲಯ ಗ್ರಂಥಾಲಯ | – ಸದಸ್ಯರು |
| 17 | ಪ್ರೊ. ಗುರುಸಿದ್ದಯ್ಯ ಸಿ, ನಿರ್ದೇಶಕರು (ಪ್ರಭಾರ) ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ | – ಸದಸ್ಯರು |
| 18 | ಕು॥ ತನುಜ ಎನ್ | – ಸದಸ್ಯರು |
| 19 | ಕು॥ ರೋಕಿಯಾ ಬೇಗಂ | – ಸದಸ್ಯರು |
| 20 | ಕು॥ ಪುಷ್ಪಲತಾ ಹೆಚ್.ಎನ್ | – ಸದಸ್ಯರು |
| 21 | ಕು॥ ಅದಿತಿ ಎನ್ | – ಸದಸ್ಯರು |
| 22 | ಕು॥ ವಸಂತ ಕುಮಾರಿ ಎಸ್ | – ಸದಸ್ಯರು |
| 23 | ಶ್ರೀ ದರ್ಶನ್ ಡಿ. ಸಂಶೋಧಾನ ವಿದ್ಯಾರ್ಥಿ | – ಸದಸ್ಯರು |
| 24 | ಪ್ರೊ. ಎನ್.ನಾಗರಾಜ, ಕುಲಸಚಿವ (ಪರೀಕ್ಷಾಂಗ) ಹಾಗೂ<br>ನಿರ್ದೇಶಕರು, ಯೋಜನೆ ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ,ಮೈಸೂರು. | – ಸದಸ್ಯರು |
| 25 | ಶ್ರೀಮತಿ ರೇಖಾ.ಕೆ.ಎಸ್, **ಕೆ.ಎಸ್.ಎ.ಎಸ್.,** ಹಣಕಾಸು ಅಧಿಕಾರಿಗಳು | |
| 26 | ಶ್ರೀಮತಿ. ಸವಿತಾ. ಎಂ.ಕೆ. **ಕೆ.ಎ.ಎಸ್.,** ಕುಲಸಚಿವರು | – ಸದಸ್ಯ ಕಾರ್ಯದರ್ಶಿ |

ಅನುಪಸ್ಥಿತರು.

| | | |
|---|---|---|
| 01 | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು | – ಸದಸ್ಯರು |
| 02 | ಶ್ರೀ. ದರ್ಶನ್ ಧ್ರುವನಾರಾಯಣ್, ವಿಧಾನ ಸಭಾ ಸದಸ್ಯರು | – ಸದಸ್ಯರು |
| 03 | ಶ್ರೀ ಎಂ.ಪಿ ಸುಜಾ ಕುಶಾಲಪ್ಪ, ವಿಧಾನ ಪರಿಷತ್ ಸದಸ್ಯರು | – ಸದಸ್ಯರು |
| 04 | ಪ್ರೊ. ಯಜ್ಞ ಮೂರ್ತಿ ಶ್ರೀಕಾಂತ್ | – ಸದಸ್ಯರು |
| 05 | ಡಾ. ಗಣೇಶ್ ಕೆ | – ಸದಸ್ಯರು |
| 06 | ಡಾ. ಮುಜೀದ ಬಾನು | – ಸದಸ್ಯರು |
| 07 | ಪ್ರೊ. ಎಂ. ಸುರೇಶ್ ಬೆಂಜಮಿನ್, ಡೀನರು, ಕಾನೂನು ನಿಕಾಯ | – ಸದಸ್ಯರು |
| 08 | ಪ್ರೊ. ಕೆ. ಸದಾಶಿವ | – ಸದಸ್ಯರು |

ಮೊದಲಿಗೆ ಕುಲಸಚಿವರು ಮಾತನಾಡಿ ಶಿಕ್ಷಣ ಮಂಡಳಿ ವಿಶೇಷ ಸಭೆಗೆ ಹಾಜರಾಗಿರುವ ಗೌರವಾನ್ವಿತ ಕುಲಪತಿ ಪ್ರೊ. ಎನ್.ಕೆ ಲೋಕನಾಥ್ ಅವರನ್ನು, ಉಪಸ್ಥಿತರಾಗಿರುವ ಗೌರವಾನ್ವಿತ ಎಲ್ಲಾ ನಿಕಾಯದ ಡೀನರುಗಳು, ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರುಗಳನ್ನು ಸಭೆಗೆ ಸ್ವಾಗತಿಸಿದರು.

ಮುಂದುವರೆದು ಹೊಸದಾಗಿ ಶಿಕ್ಷಣ ಮಂಡಳಿ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ವಿದ್ಯಾವಿಷಯಕ ಪರಿಷತ್‌ನ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

1. ಪ್ರೊ. ಬಿ ಚಂದ್ರಶೇಖರ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
2. ಪ್ರೊ. ನಾಗೇಂದ್ರ ಬಾಬು. ಕೆ., ಡೀನರು, ವಾಣಿಜ್ಯ ನಿಕಾಯ, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
3. ಪ್ರೊ. ಸುರೇಶ, ಪ್ರಾಧ್ಯಾಪಕರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
4. ಪ್ರೊ. ಕೆ. ಮಂಟೇಲಿಂಗು, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯಭವನ ಮಾನಸಗಂಗೋತ್ರಿ, ಮೈಸೂರು, ಇವರುಗಳನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಲಾಯಿತು.

ಇದುವರೆವಿಗೂ ಶಿಕ್ಷಣ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ನಡವಳಿಯಲ್ಲಿ ದಾಖಲಿಸಲಾಯಿತು.

1. ಶ್ರೀ ಸಿ. ಎನ್.ಮಂಜೇಗೌಡ, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರ್ಕಾರ, ಬೆಂಗಳೂರು.
2. ಪ್ರೊ. ಬಿ ಮಹಾದೇವಪ್ಪ, ಡೀನರು, ವಾಣಿಜ್ಯ ನಿಕಾಯ, ವಾಣಿಜ್ಯ ವಿಭಾಗ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ.
3. ಡಾ. ವಿಜಯಲಕ್ಷ್ಮೀ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
4. ಪ್ರೊ. ಆಯಿಷಾ ಎಂ. ಷರಿಫ್, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ಸನ್ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ, ಈ ಕೆಳಕಂಡ ಕಾರ್ಯಸೂಚಿಗಳನ್ನು ಕುಲಸಚಿವರು ಸಭೆಯಲ್ಲಿ ಮಂಡಿಸಿದರು.

| ವಿಶೇಷ ಸಭೆ ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| **I.I** | ದಿನಾಂಕ: 22-10-2024 ರಂದು ಜರುಗಿದ ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | **ದಿನಾಂಕ: 22-10-2024 ರಂದು ಜರುಗಿದ ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು.** |
| **I.II** | ದಿನಾಂಕ: 18-01-2025 ರಂದು 105ನೇ ವಾರ್ಷಿಕ ಘಟಿಕೋತ್ಸವದ ಪ್ರಯುಕ್ತ ಜರುಗಿದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | **ದಿನಾಂಕ: 18-01-2025 ರಂದು 105ನೇ ವಾರ್ಷಿಕ ಘಟಿಕೋತ್ಸವದ ಪ್ರಯುಕ್ತ ಜರುಗಿದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು.** |
| **I.III** | ದಿನಾಂಕ: 13-02-2025 ರಂದು ಜರುಗಿದ ಶಿಕ್ಷಣ ಮಂಡಳಿ ವಿಶೇಷ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | **ದಿನಾಂಕ: 13-02-2025 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು.** |
| **ವಿಶೇಷ ಸಭೆ 2025/II.1** | 2024-25ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ ಶೀರ್ಷಿಕೆಗಳಲ್ಲಿ ಪರಿಷ್ಕರಿಸಿರುವುದನ್ನು/ ಮರುಹೊಂದಾಣಿಕೆ ಮಾಡಿಕೊಂಡಿರುವುದರ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ 2024-25ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜುಗಳ ಶೀರ್ಷಿಕೆಗಳಲ್ಲಿ ಪರಿಷ್ಕರಿಸಿರುವುದನ್ನು/ ಮರುಹೊಂದಾಣಿಕೆ ಮಾಡಿಕೊಂಡಿರುವುದರ ಬಗ್ಗೆ. ಹಣಕಾಸು ಅಧಿಕಾರಿಗಳು ಸಭೆಗೆ ವಿವರಿಸುವಂತೆ ತಿಳಿಸಿದರು, ಹಣಕಾಸು ಅಧಿಕಾರಿಗಳು ಮಾತನಾಡಿ, 2024-25ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳಲ್ಲಿ ಅನಿವಾರ್ಯವಾಗಿ ಅಗತ್ಯ ವೆಚ್ಚಗಳಿಗಾಗಿ ಕೆಲವು ಶೀರ್ಷಿಕೆಗಳಲ್ಲಿ ಪರಿಷ್ಕರಣೆ/ ಮರು ಹೊಂದಾಣಿಕೆ ಮಾಡಿಕೊಂಡಿರುವ ಪಟ್ಟಿಯನ್ನು ದಿನಾಂಕ: 24-03-2025ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ ಮತ್ತು ದಿನಾಂಕ: 04-04-2025ರಂದು ನಡೆದ ಸಿಂಡಿಕೇಟಿನ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ ಎಂದು ಸಭೆಯ ಗಮನಕ್ಕೆ ತಂದು ಈ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, 2024-25ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳಲ್ಲಿ ಅನಿವಾರ್ಯವಾಗಿ ಅಗತ್ಯ ವೆಚ್ಚಗಳಿಗಾಗಿ ಕೆಲವು ಶೀರ್ಷಿಕೆಗಳಲ್ಲಿ ಪರಿಷ್ಕರಣೆ/ಮರು ಹೊಂದಾಣಿಕೆ ಮಾಡಿಕೊಂಡಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ತಿಳಿಸುವಂತೆ ಸಭೆಯ ಗಮನಕ್ಕೆ ತಂದರು.<br><br>ಪ್ರೊ. ಸಿ. ವೆಂಕಟೇಶ್, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಇವರು ಮಾತನಾಡಿ, ಈ ಬಾರಿ ಬಜೆಟ್‌ನಲ್ಲಿ ಕ್ರೀಡೆಗೆ ರೂ. 40ಲಕ್ಷ ನಿಗಧಿಪಡಿಸಲಾಗಿದೆ. ಕಳೆದ ಬಾರಿ ಬಜೆಟ್‌ನಲ್ಲಿ ಕ್ರೀಡೆಗೆ ರೂ. 60 ಲಕ್ಷ ರೂಗಳು ನೀಡಿದ್ದು. ಪ್ರಸ್ತುತ ಸಾಲಿನ ಆಯವ್ಯಯದಲ್ಲಿ 20 ಲಕ್ಷ ಕಡಿಮೆಯಾಗಿದೆ, ಇದರಿಂದ ಕ್ರೀಡಾ ಚಟುವಟಿಕೆಗಳನ್ನು ನಡೆಸಲು ಸಾಧ್ಯವಾಗುವುದಿಲ್ಲ ಕ್ರೀಡಾ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿವೇತನಕ್ಕೆ ರೂ.3ಲಕ್ಷದ 75 ಸಾವಿರ ನಿಗಧಿಪಡಿಸಿದ್ದು, ಆದರೆ ಕ್ರೀಡಾ ವಿದ್ಯಾರ್ಥಿಗಳಿಗೆ ರೂ.2ಲಕ್ಷದ 25 ಸಾವಿರ ಖರ್ಚಾಗುತ್ತಿದೆ. ಕ್ರೀಡಾ ಚಟುವಟಿಕೆಯ |

| | |
|---|---|
| | ಬಜೆಟ್‌ನಲ್ಲಿ ಉಳಿದ ರೂ. 1.5 ಲಕ್ಷವನ್ನು, ಈಜುಕೊಳದ ನೀರಿನ ಶುದ್ಧೀಕರಣಕ್ಕೆ ಬಳಕೆ ಮಾಡುವ ಕೆಮಿಕಲ್ ವೆಚ್ಚಕ್ಕೆ ನಿಗಧಿಯಾಗಿರುವ ರೂ.3ಲಕ್ಷದೊಂದಿಗೆ ರೂ. 1.5 ಲಕ್ಷ ನೀಡಿದಲ್ಲಿ ಈಜುಕೊಳದ ನಿರ್ವಹಣೆಗೆ ಸಹಾಯವಾಗುತ್ತದೆ ಕ್ರೀಡಾ ಚಟುವಟಿಕೆಗೆ ಅವಶ್ಯ ಮನ್ನಣೆ ನೀಡುವಂತೆ ಕೋರಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಕೆಮಿಕಲ್ ವೆಚ್ಚವನ್ನು ಭರಿಸುವ ಬಗ್ಗೆ ಮತ್ತೊಮ್ಮೆ ಚರ್ಚಿಸುವುದಾಗಿ ತಿಳಿಸಿದರು. ಪ್ರಸ್ತುತ ವಿಶ್ವವಿದ್ಯಾನಿಲಯ ಒಂದು ಜಿಲ್ಲೆಗೆ ಮಾತ್ರ ಸಿಮೀತವಾಗಿರುತ್ತದೆ ಎಲ್ಲಾ ವಿದ್ಯಾರ್ಥಿಗಳು ಎಲ್ಲಾ ಕ್ರೀಡಾ ಚಟುವಟಿಕೆಗಳಿಗೆ ಭಾಗವಹಿಸುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **2024-25ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ ಶೀರ್ಷಿಕೆಗಳಲ್ಲಿ ಪರಿಷ್ಕರಿಸಿರುವುದನ್ನು/ ಮರುಹೊಂದಾಣಿಕೆ ಮಾಡಿಕೊಂಡಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| **ವಿಶೇಷ ಸಭೆ 2025/II.2** | 2025-26ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿಯನ್ನು ವಿದ್ಯಾ ವಿಷಯಕ ಪರಿಷತ್ ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| | ಮಾನ್ಯ ಕುಲಪತಿಯರು ಮಾತನಾಡಿ 2025-26ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯವನ್ನು ಹಣಕಾಸು ಅಧಿಕಾರಿಗಳು ಸಭೆಗೆ ಮಂಡಿಸುವಂತೆ ತಿಳಿಸಿದರು ಹಣಕಾಸು ಅಧಿಕಾರಿಯವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ **2025-26ನೇ** ಸಾಲಿನ ಆಯವ್ಯಯದ ಅಂದಾಜುಗಳ 'ಕರಡು' ನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000, ಪ್ರಕರಣ 31(2)(XV) ರನ್ವಯ ಆಯವ್ಯಯವನ್ನು ಸಭೆಯಲ್ಲಿ ಮಂಡಿಸಿ ಮಾತನಾಡುತ್ತಾ, ಮೈಸೂರು ವಿಶ್ವವಿದ್ಯಾನಿಲಯವು **108** ವಸಂತಗಳನ್ನು ಪೂರೈಸಿ, **109ನೇ** ವರ್ಷಕ್ಕೆ ಕಾಲಿಟ್ಟಿದ್ದು, ಸುಮಾರು **1822** ಪಿಂಚಣಿ/ಕುಟುಂಬ ಪಿಂಚಣಿದಾರರು, ಪಿಂಚಣಿ ಸೌಲಭ್ಯಗಳನ್ನು ಪಡೆಯುತ್ತಿದಾರೆ, **2025-26ನೇ** ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜಿನಲ್ಲಿ ಸರ್ಕಾರದಿಂದ ಬಿಡುಗಡೆಯಾಗುವ ನಿರೀಕ್ಷಿತ ಆದಾಯ ಮತ್ತು ವಿಶ್ವವಿದ್ಯಾನಿಲಯದಿಂದ ನಿರೀಕ್ಷಿತ ಆದಾಯ ಒಟ್ಟಾರೆ ಪ್ರಸ್ತತ ಸಾಲಿನ ಆಯವ್ಯಯದಲ್ಲಿ **ರೂ. 107,72** ಕೋಟಿಗಳು ಕೊರೆತೆಯಾಗಿರುತ್ತದೆಂದು ಸಭೆಗೆ ತಿಳಿಸಿದರು.<br><br>ಹಣಕಾಸು ಅಧಿಕಾರಿಯವರು ಮುಂದುವರೆದು ಮಾತನಾಡುತ್ತಾ ವಿಶ್ವವಿದ್ಯಾನಿಲಯದ 17 ಖಾತೆ (ಪಾಯೋಜಿತ ಕಾರ್ಯಕ್ರಮಗಳು, ಮತ್ತು ಇನ್ನಿತ್ತರ ಖಾತೆಗಳು ಒಳಗೊಂಡಂತೆ) ಸ್ವೀಕೃತಿ ಹಾಗೂ ಬಡ್ಡಿ ಮೊತ್ತ ಸೇರಿ ಒಟ್ಟು ಆದಾಯ ರೂ. 46,32,00,000/-ಗಳು ಮತ್ತು ವೆಚ್ಚ ರೂ. 39,05,00,000/- ಕೋಟಿಗಳು ನಿಗಧಿಪಡಿಸಲಾಗಿದ್ದು ಇವುಗಳ ಆದಾಯ ಮತ್ತು ವೆಚ್ಚಗಳು ಆರ್ಥಿಕ ಹೊರೆಗೆ ಒಳಪಡುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಸುಮಾರು **1822** ನಿವೃತ್ತ ನೌಕರರಿದ್ದಾರೆ ಮತ್ತು ಪ್ರಸ್ತುತ 2025ನೇ ಕ್ಯಾಲೆಂಡರ್ ವರ್ಷದಲ್ಲಿ **59** ನೌಕರರು ನಿವೃತ್ತರಾಗಲ್ಲಿದ್ದಾರೆ. ವಿಶ್ವವಿದ್ಯಾನಿಲಯಕ್ಕೆ ಪಿಂಚಣಿದಾರರು ಮತ್ತು ಉಪನ್ಯಾಸಕರುಗಳ ವೇತನವೇ ಹೆಚ್ಚು ಹೊರೆಯಾಗಿದ್ದು, ರಾಜ್ಯ ಸರ್ಕಾರದಿಂದ ನಿರೀಕ್ಷಿತ ಅನುದಾನ ಬರುತ್ತಿಲ್ಲ ಎಂದು ತಿಳಿಸಿದರು. ಈ ಸಂಬಂಧ ಸರ್ಕಾರದ ಗಮನಕ್ಕೆ ಎಲ್ಲಾ ವಿಷಯಗಳನ್ನು ತರಲಾಗಿದೆ ಎಂದು ತಿಳಿಸಿ **ರೂ. 107,72** ಕೋಟಿ ಹಣದ ಕೊರೆತೆಯನ್ನು ಸರಿದೂಗಿಸಲು ಸದಸ್ಯರುಗಳು ತಮ್ಮ ಸಲಹೆ ಸೂಚನೆಗಳನ್ನು ನೀಡುವಂತೆ ಕೋರಿದರು. |

| | |
|---|---|
| | ಪ್ರೊ. ಜಿ.ಆರ್.ಜನಾರ್ಧನ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಇವರು ಮಾತನಾಡಿ, ರೂ. 107.72 ಕೋಟಿಗಳ ಹಣದ ಕೊರತೆಯನ್ನು ಹೇಗೆ ಸರಿದೂಗಿಸುವುದು? ಸರ್ಕಾರದ ಗಮನಕ್ಕೆ ತಂದು ನಿವೃತ್ತ ನೌಕರರಿಗೂ ಸಹ ಖಾಯಂ ನೌಕರರಿಗೆ HRMS ಮುಂಖಾತರ ಸರ್ಕಾರದಿಂದಲೇ ವೇತನ ನೀಡುವ ಹಾಗೆ ಪಿಂಚಣಿದಾರರಿಗೂ ಹೆಚ್‌ಆರ್‌ಎಂಎಸ್ ಮೂಲಕವೇ ಪಿಂಚಣಿ ಸೌಲಭ್ಯ ಭರಿಸಿದರೆ ಸಮಸ್ಯೆ ಬಗೆಹರಿಸಬಹುದು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಹೆಚ್‌ಆರ್‌ಎಂಎಸ್‌ನಲ್ಲಿ ನಿವೃತ್ತ ನೌಕರರಿಗೂ ಸಹ ಪಿಂಚಣಿ ಸೌಲಭ್ಯ ಒದಗಿಸುವ ಕ್ರಮ ಸರ್ಕಾರದಿಂದ ಭರಿಸುವ ವಿಚಾರವು ಕೇಳಿಬರುತ್ತಿದೆ. ಈ ಸಂಬಂಧ ವಿಶ್ವವಿದ್ಯಾನಿಲಯವೂ ಕೂಡ ಸರ್ಕಾರಕ್ಕೆ ಹಲವಾರು ಬಾರಿ ಪತ್ರ ಬರೆಯಲಾಗಿದೆ ವಿಶ್ವವಿದ್ಯಾನಿಲಯದಿಂದಲೂ ಖರ್ಚುಗಳ ಬಗ್ಗೆ ಕಡಿವಾಣ ಹಾಕಲಾಗುತ್ತಿದೆ ಆದರೆ ರೂ.107.72 ಕೋಟಿ ಹಣವನ್ನು ಸರಿದೂಗಿಸುವ ಯಾವುದೇ ಆದಾಯ ಬರುವ ನಿರೀಕ್ಷೆ ವಿಶ್ವವಿದ್ಯಾನಿಲಯದಲ್ಲಿ ಇಲ್ಲವೆಂದು ತಿಳಿಸಿದರು. ವಿಶ್ವವಿದ್ಯಾನಿಲಯದ ಮೂರು ಸ್ನಾತಕೋತ್ತರ ಕೇಂದ್ರಗಳನ್ನು ಮೂರು ವಿಶ್ವವಿದ್ಯಾನಿಲಯಗಳಾಗಿ ವಿಭಜನೆಯಾದ ಕಾರಣ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ಕುಸಿದಿದೆ. ಇದರಿಂದ ಆಂತರಿಕ ಸಂಪನ್ಮೂಲವೂ ಕುಂಠಿತಗೊಂಡಿದೆ. 2019ರವರೆಗೆ ಸರ್ಕಾರವೆ ಪಿಂಚಣಿ ನೀಡುತಿತ್ತು. ಕೋವಿಡ್ ಬಳಿಕ ಎಲ್‌ಐಸಿ ಪೆನ್ಷನ್ ಫಂಡ್ ಮೂಲಕ ಕೊಡಲಾಗುತಿತ್ತು. ಪ್ರಸ್ತುತ ನಾವೇ ಪಿಂಚಣಿ ಹಣವನ್ನು ಭರಿಸಬೇಕಾದ ಪರಿಸ್ಥಿತಿ ಬಂದಿದೆ ರಾಜ್ಯ ಸರ್ಕಾರವು ಪ್ರಸ್ತುತ ಆರ್ಥಿಕ ವರ್ಷಕ್ಕೆ ಪಿಂಚಣಿಗಾಗಿ **ರೂ.50ಕೋಟಿ** ಹಂಚಿಕೆ ಮಾಡಿರುವುದರಿಂದ ಮುಂದಿನ ತಿಂಗಳು ಪಿಂಚಣಿ ನೀಡಲು ನಮ್ಮಲ್ಲಿ ಹಣವಿಲ್ಲ ಎಂದು ಸಭೆಯ ಗಮನಕ್ಕೆ ತಂದರು.<br><br>ಪ್ರೊ. ಡಿ ಆನಂದ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ಆದಾಯ ಮೂಲ ಹೆಚ್ಚಿಸುವ ಹಾಗೂ ಶೈಕ್ಷಣಿಕವಾಗಿ ಫೀಸ್ ಹೆಚ್ಚಿಸುವುದರಿಂದ ಸರಿದೂಗಿಸಬಹುದೇ ಎಂದು ತಿಳಿಸಿದರು,<br><br>ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯವು ಈಗಾಗಲೇ ಶುಲ್ಕಗಳನ್ನು ಹೆಚ್ಚಿಸಲಾಗಿದೆ. ಎಂದು ತಿಳಿಸಿದರು.<br><br>ಪ್ರೊ. ಗುರುಸಿದ್ದಯ್ಯ ಸಿ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ ಇವರು ಮಾತನಾಡಿ, ವಸತಿಗೃಹಗಳ ಬಾಡಿಗೆ ಹೆಚ್ಚಿಸುವ ಸಂಬಂಧ ವಿಶ್ವವಿದ್ಯಾನಿಲಯದ ಯಾವುದೇ ವಸತಿನಿಲಯಗಳು ಖಾಲಿ ಬಿಡದಂತೆ ನಿರ್ವಹಣೆ ಮಾಡುವುದರಿಂದ ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ವಾಣಿಜ್ಯ ಮಳಿಗೆ, ಆಡಿಟೋರಿಯಂ ಮತ್ತು ಸಭಾಂಗಣಗಳ ಬಾಡಿಗೆ ಹೆಚ್ಚಿಸುವುದರಿಂದ ತಕ್ಕಮಟ್ಟಿಗೆ ಹೊರೆ ಕಡಿಮೆ ಮಾಡಬಹುದಾಗಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಖಾಯಂ ನೌಕರರಿಗಿಂತ ತಾತ್ಕಾಲಿಕ ನೌಕರರೆ ಹೆಚ್ಚಾಗಿದ್ದು ಅವರಿಗೆ ನೀಡುವ ವೇತನಕ್ಕೆ ವಸತಿಗೃಹಗಳ ಶುಲ್ಕ ಹೆಚ್ಚಿಸುವುದು ಕಷ್ಟ ಮತ್ತು ವಸತಿಗೃಹಗಳ ನಿರ್ವಹಣೆ ವೆಚ್ಚವೂ ಕೂಡ ಅಧಿಕವಾಗುತ್ತದೆ. ಇದರಿಂದ ಕೊರತೆ ಹಣವನ್ನು ಸರಿದೂಗಿಸಲು ಸಾಧ್ಯವಾಗುವುದಿಲ್ಲ.<br><br>ಪ್ರೊ. ಡಿ. ಆನಂದ್‌ರವರು ಮಾತನಾಡಿ, ಹೊಸ ಪ್ರೋಗ್ರಾಂಗಳನ್ನು ಪರಿಚಯಿಸುವುದು ಅದರಲ್ಲಿ ಆದಾಯ ನಿರೀಕ್ಷಿಸಬಹುದು.<br>ಇದಕ್ಕುತ್ತರವಾಗಿ ಪ್ರೊ. ಜಿ.ಆರ್. ಜನಾರ್ಧನ್‌ರವರು ಮಾತನಾಡಿ, ಹೊಸ ಪ್ರೋಗ್ರಾಂಗಳನ್ನು ಪರಿಚಯಿಸುವುದರಿಂದ ಅಧ್ಯಾಪಕರುಗಳ ಅವಶ್ಯಕತೆಯೂ ಸಹ ಹೆಚ್ಚಾಗುತ್ತದೆ.<br><br>ಪ್ರೊ. ಸುರೇಶ್, ರವರು ಮಾತನಾಡಿ ಬೇಡಿಕೆ ಕೋರ್ಸ್‌ಗಳನ್ನು ಪ್ರಾರಂಭಿಸಬಹುದು ಆದರೆ ನಮ್ಮ ಮೂಲ Basic Scienceಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು ಸೂಕ್ತವಾಗಿರುತ್ತೆಂದು ತಿಳಿಸಿದರು. |

| | |
|---|---|
| | ಪ್ರೊ. ಗುರುಸಿದ್ದಯ್ಯ.ಸಿ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ ಇವರು ಮಾತನಾಡಿ, ರಾಜ್ಯದ ಕೆಲವು ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿನಿಲಯಗಳನ್ನು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದಲೇ ನಿರ್ವಹಿಸುತ್ತಿರುವುದು ಕೇಳಿ ಬಂದಿದೆ. ಬೆಂಗಳೂರು ವಿಶ್ವವಿದ್ಯಾನಿಲಯ ಹಾಗೂ ಹಂಪಿ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿನಿಲಯವನ್ನು ಸಮಾಜ ಕಲ್ಯಾಣ ಇಲಾಖೆಯೇ ನಿರ್ವಹಣೆ ಮಾಡುತಿದೆ ಎಂಬ ಮಾಹಿತಿಯಿದ್ದು, ನಮ್ಮ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳನ್ನು ಸಹ ಸಮಾಜ ಕಲ್ಯಾಣ ಇಲಾಖೆ ವಹಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳ ಶಿಷ್ಯವೇತನದ ತೊಂದರೆಯಾಗುವುದು ಕಡಿಮೆಯಾಗುತ್ತದೆ. ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಫಂಡ್‌ಗಳು ಬರುತ್ತದೆ, ವಿಶ್ವವಿದ್ಯಾನಿಲಯ ವಿದ್ಯಾರ್ಥಿನಿಲಯವನ್ನು ನಿರ್ವಹಣೆ ಮಾಡುವುದು ಸಹ ಕಡಿಮೆಯಾಗುತ್ತದೆಂದು ಸಭೆಯ ಗಮನಕ್ಕೆ ತಂದರು.<br>ಮಾನ್ಯ ಕುಲಪತಿಯವರು ಮಾತನಾಡಿ ರಾಜ್ಯದ ಯಾವ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿನಿಲಯಗಳನ್ನು ಸಮಾಜ ಕಲ್ಯಾಣ ಇಲಾಖೆಯವರು ನಿರ್ವಹಣೆ ಮಾಡುತ್ತಿದ್ದಾರೆಂದು ಮಾಹಿತಿಯನ್ನು ಪಡೆದು ಸಲ್ಲಿಸುವಂತೆ ಹಾಗೂ ಸದರಿ ಮಾಹಿತಿಗಳನ್ನು ಪರಿಶೀಲಿಸಿ ನಮ್ಮ ವಿಶ್ವವಿದ್ಯಾನಿಲಯದ ವತಿಯಿಂದಲೂ ಸಹ ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲು ಕ್ರಮವಹಿಸಬಹುದಾಗಿದೆ ಎಂದು ತಿಳಿಸಿದರು. |
| ತೀರ್ಮಾನ | **2025–26ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಕೊರತೆಯ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000, ಪ್ರಕರಣ 31(2)(XV)ರ ಮೇರೆಗೆ ವಿದ್ಯಾ ವಿಷಯಕ ಪರಿಷತ್ತು ಸಭೆಯು ಅವಗಾಹಿಸಿ ಅನುಮೋದಿಸಿತು.** |

**ಇತರೆ ವಿಷಯಗಳು:**

- ಕು॥ ವಸಂತ ಕುಮಾರಿ ಎಸ್. ವಿದ್ಯಾರ್ಥಿ ಪ್ರತಿನಿಧಿ ಇವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ Dissertation ಕೋರ್ಸ್‌ನ ಪ್ರಬಂಧಗಳ ಪುಸ್ತಕದ ಸಂಖ್ಯೆ ಹೆಚ್ಚಿಸುವಂತೆ ಹಾಗೂ Dissertationಗೆ ಸಂಬಂಧಿಸಿದಂತೆ ಎರಡು ವರ್ಷಗಳಿಂದ ಹಣ ಬಂದಿರುವುದಿಲ್ಲ ಹಣ ಬಿಡುಗಡೆ ಮಾಡುವಂತೆ ಮಾನವಿ ಮಾಡಿದರು.
- ಮಾನ್ಯ ಕುಲಪತಿಯವರು ಮಾತನಾಡಿ, ಕೇಂದ್ರ ಸರ್ಕಾರ One Nation One Subscription ಇದರಡಿಯಲ್ಲಿ ಪ್ರಬಂಧಗಳು Digitalization ಆಗಿದ್ದು, ತಮಗೆ ಬೇಕಾದ ಪ್ರಬಂಧಗಳ ನಕಲು ಪ್ರತಿಯನ್ನು ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ತಂತ್ರಜ್ಞಾನ ಬದಲಾವಣೆಯಾದಂತೆಲ್ಲಾ ತಾವುಗಳು ಕೂಡ ಇದಕ್ಕೆ ಹೊಂದಿಕೊಳ್ಳಬೇಕೆಂದು ತಿಳಿಸಿ, Dissertationನ ಫಲಿತಾಂಶ ಬಂದ ನಂತರ ಹಣ ಬಿಡುಗಡೆಯಾಗುತ್ತದೆಂದು ತಿಳಿಸಿದರು.
- ಮಾನ್ಯ ಕುಲಪತಿಯವರು ಮಾತನಾಡಿ, ರಾಜ್ಯದಲ್ಲಿ ಎನ್‌ಇಪಿ ಪಠ್ಯದ ಬಗ್ಗೆ ಗೊಂದಲವಿದ್ದು, ಸರ್ಕಾರ ಎಸ್‌ಇಪಿ (ಮಾಡಿಫೈ–ಎನ್‌ಇಪಿ) ಮಾರ್ಗಸೂಚಿಯನ್ನು ಬಿಡುಗಡೆ ಮಾಡಿರುತ್ತದೆ. ಇದನ್ನು ಬೆಂಗಳೂರು ಮತ್ತು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಂಡಿದ್ದು, ನಮ್ಮ ವಿಶ್ವವಿದ್ಯಾನಿಲಯದಲ್ಲೂ ಸಹ ಅಳವಡಿಸಿಕೊಳ್ಳಲು ಎಸ್‌ಇಪಿ (ಮಾಡಿಫೈ–ಎನ್‌ಇಪಿ) ಪದವಿಯಲ್ಲಿ ಪಠ್ಯಕ್ರಮ ಸಿದ್ದಪಡಿಸಲು ಕ್ರಮವಹಿಸುವುದು ಸೂಕ್ತವೆಂದು ಸಭೆಯ ಗಮನಕ್ಕೆ ತಂದರು.
- ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಸಹಿ/–**
**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ**

**ಸಹಿ/–**
**ಕುಲಪತಿಗಳು ಮತ್ತು ಅಧ್ಯಕ್ಷರು**